**ಮೂಲ ದಾವಾ ನಂಃ 42/2014**
**ಡಿ. ಡಬ್ಲ್ಯು 1**

(ಇಂದು ದಿನಾಂಕಃ 20-02-2026 ರಂದು ಡಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 9 ರಿಂದ 13 ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರು ಗೈರು ಹಾಜರು ಇದ್ದಾರೆ ಆದ್ದರಿಂದ ಪಾಟೀ ಸವಾಲನ್ನು ಇಲ್ಲ ತೆಗೆದುಕೊಳ್ಳಲಾಗಿದೆ**

**ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಎಂ ಎಲ್ ಎನ್ ಹೆಚ್ ರವರಿಂದಃ-**

ವೆಂಕಟೇಶ ಬಾಬು ಭಂಡಾರಿ ಇವರು ನಿಮ್ಮ ಕುಟುಂಬದ ಮೂಲ ಪುರುಷ ಎಂದರೆ ಸರಿ. ಅವರ ಹೆಂಡತಿಯ ಹೆಸರು ರತ್ನಿಭಾಯಿ ಭಂಡಾರಿ . ಸದ್ರಿಯವರಿಗೆ 3 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಗಂಡು ಮಕ್ಕಳೆಂದರೆ ಬಾಬು, ಗಂಗಾಧರ ಮತ್ತು ಗಣಪತಿ ಎಂದರೆ ಸರಿ. ಆ ಪೈಕಿ ಬಾಬು ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರಿಗೆ ಮದುವೆ ಆಗಿರಲಿಲ್ಲ. ಹೆಣ್ಣು ಮಕ್ಕಳೆಂದರೆ ಯಮುನಾ, ಕಾವೇರಿ, ಕೃಷ್ಣಿ , ಉಬಗ ಎಂದರೆ ಸರಿ. ಸದ್ರಿ ಯಮುನಳ ಮಗ ಲಕ್ಷ್ಮಣ , ಲಕ್ಷ್ಮಣನ ಮಗ ಗಣಪತಿ ಈ ದಾವೆಯ 1 ನೇ ವಾದಿ ಎಂದರೆ ಸರಿ. ಕಾವೇರಿಯ ಮಗಳು ವಿಶ್ರಾಂತಿ . ಸದ್ರಿ ವಿಶ್ರಾಂತಿ ಈ ದಾವೆಯ 2 ನೇ ವಾದಿ ಎಂದರೆ ಸರಿ. ಕೃಷ್ಣಿಯ ಮಗ ನಂದ ಈ ದಾವೆಯ 3 ನೇ ವಾದಿ ಎಂದರೆ ಸರಿ. ಉಬಗಳ ಮಗಳು ಸಸಿ ಈ ದಾವೆಯ 4 ನೇ ವಾದಿ ಎಂದರೆ ಸರಿ. ನಿಮ್ಮ ಮಾಹಿತಿಯ ಮೇರೆಗೆ ನಿಮ್ಮ ವಕೀಲರು ಈ ದಾವೆಯನ್ನು ನಿಮ್ಮ ತಕರಾರನ್ನು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಈ ಮೇಲೆ ಹೇಳಿದ ಕುಟುಂಬದ ಸದಸ್ಯರ ಸಂಬಂಧವನ್ನು ಒಪ್ಪಿಕೊಂಡು ಲಿಖಿತ ತಕರಾರನ್ನು ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ.

2. ನಾನು 1978 ರಲ್ಲಿ ಹುಟ್ಟಿದ್ದೆ. ನಾನು ಎಸ್.ಎಸ್.ಎಲ್.ಸಿ ತನಕ ವಿದ್ಯಾಭ್ಯಾಸ ಮಾಡಿರುತ್ತೇನೆ. 1978 ರ ನಂತರದ ಕಾಗದ ಪತ್ರಗಳನ್ನು ನೋಡಿ ನೀವು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ನನ್ನ ತಂದೆಯವರು ಸಹ ನನಗೆ ಹೇಳಿದ್ದರು ಅಂತಾ ಉತ್ತರಿಸುತ್ತಾರೆ. ಆ ರೀತಿ ಮಾಹಿತಿ ಕೊಡುವ ಸಮಯದಲ್ಲಿ ನನ್ನ ತಂದೆಯವರು 4 ಜನ ಸಹೋದರಿಯರು ಇರುವ ವಿಷಯವನ್ನು ಹೇಳಿದ್ದರು ಎಂದರೆ ಸರಿ.

**ಮೂಲ ದಾವಾ ನಂಃ 42/2014**

**ಡಿ. ಡಬ್ಲ್ಯು 1**

3. ಈ ದಾವೆಯನ್ನು ನೀವು ಪೂರ್ತಿ ಓದಿ ನೋಡಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ದಾವಾ ಆಸ್ತಿಯ ಕುರಿತು ಈವರೆಗೆ ಎಷ್ಟು ಪ್ರಕರಣಗಳು ನಡೆದಿವೆ ಎಂದರೆ ಸಾಕ್ಷಿ 3 ಪ್ರಕರಣಗಳು ನಡೆದಿವೆ ಅಂತಾ ಉತ್ತರಿಸುತ್ತಾರೆ. ಒಂದು ಮೂಲ ದಾವಾ ನಂಬ್ರ 212/2011 ಎಂದರೆ ಸರಿ. ಇನ್ನೊಂದು ಅಮಲ್ಜಾರಿ ಸಂಖ್ಯೆ 290/2009 ಹಾಗೂ ಮತ್ತೊಂದು ಇದೆ ದಾವೆ ಆಗಿರುತ್ತದೆ. ಅಮಲ್ಜಾರಿ ಸಂಖ್ಯೆ 290/2009 ರ ಪ್ರಕರಣವು LAC ಅವಾರ್ಡ್ ನ ಆಧಾರದಲ್ಲಿ ಆಗಿರುವ ಪ್ರಕರಣ ಎಂದರೆ ಸರಿಯಲ್ಲ. ಸ್ವದ್ರಿ ಅಮಲ್ಜಾರಿ ಪ್ರಕರಣದಲ್ಲಿ ನೀವು ಸಹ ಪಕ್ಷಗಾರರಿದ್ದೀರಿ ಎಂದರೆ ಸರಿಯಲ್ಲ. ಸ್ವದ್ರಿ ಅಮಲ್ಜಾರಿ ಪ್ರಕರಣವನ್ನು ನಿಮ್ಮ ತಾಯಿ ಸರಸ್ವತಿ ಗಣಪತಿ ಕಲ್ಲುಟ್ಕರ್ ರವರು ದಾಖಲಿಸಿದ್ದರು ಎಂದರೆ ಸಾಕ್ಷಿ ನನ್ನ ತಂದೆ ಸಲ್ಲಿಸಿದ್ದು ಆನಂತರ ನನ್ನ ತಾಯಿ ಆ ಪ್ರಕರಣದಲ್ಲಿ ಬಂದಿರುತ್ತಾರೆ ಅಂತಾ ಉತ್ತರಿಸುತ್ತಾರೆ. ಸ್ವದ್ರಿ ಪ್ರಕರಣದಲ್ಲಿ ನನ್ನ ತಾಯಿ ತೀರಿಕೊಂಡ ನಂತರ ನಮ್ಮನ್ನೆಲ್ಲಾ ವಾರಸುದಾರರಾಗಿ ಸೇರಿಸಿರುತ್ತಾರೆ ಎಂದರೆ ಸರಿ. ಸ್ವದ್ರಿ ಅಮಲ್ಜಾರಿ ಪ್ರಕರಣ ಈಗಲೂ ಸಹ ಬಾಕಿ ಇದೆ ಎಂದರೆ ಸಾಕ್ಷಿ 3 ವರ್ಷಗಳ ಹಿಂದೆ ಕ್ಲೋಸ್ ಆಗಿದೆ ಅಂತಾ ಉತ್ತರಿಸುತ್ತಾರೆ. ಸ್ವದ್ರಿ ಅಮಲ್ಜಾರಿ ಪ್ರಕರಣದಲ್ಲಿ ನೀವು ಹಣವನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಸ್ವದ್ರಿ ಅಮಲ್ಜಾರಿ ಪ್ರಕರಣದಲ್ಲಿ ಸರ್ಕಾರದಿಂದ ತುಂಬಿರುವ ಹಣ ಈಗಲೂ ಡಿಪಾಸಿಟ್ ಆಗಿ ಇದೆ ಎಂದರೆ ನನಗೆ ಗೊತ್ತಿಲ್ಲ.

4. ವಾದಿಯರ ಪರ ಹಾಜರುಪಡಿಸಿರುವ ದಾಖಲೆಗಳನ್ನು ನೀವು ಓದಿ ನೋಡಿದ್ದೀರಾ ಎಂದರೆ ಸಾಕ್ಷಿ ಓದಿ ನೋಡಿದ್ದೇನೆ ಆದರೆ ಅದರಲ್ಲಿ ವಾದಿಯರ ಹೆಸರು ಇರುವುದಿಲ್ಲ ಅಂತಾ ಉತ್ತರಿಸುತ್ತಾರೆ. ಆ ಪೈಕಿ ಅಮಲ್ಜಾರಿ ಸಂಖ್ಯೆ 290/2009 ರ ಪ್ರಕರಣದ ಆದೇಶ ಪುಟದ ದೃಢಿಕೃತ ಪ್ರತಿಯನ್ನು ನಿಪಿ-26 ರಂತೆ ಹಾಜರುಪಡಿಸಿದ್ದಾರೆ ಎಂದರೆ ಸರಿ. ಸ್ವದ್ರಿ ಅಮಲ್ಜಾರಿ ಪ್ರಕರಣದಲ್ಲಿ ಈ ದಾವೆಯ ವಾದಿಯರು ನಮ್ಮನ್ನು ಡಿಕ್ರಿ ಹೋಲ್ಡರರನ್ನಾಗಿ ಸೇರ್ಪಡೆ ಮಾಡಿ ಅಂತಾ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸ್ವದ್ರಿ ಅರ್ಜಿ ಇನ್ನೂ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿಯಲ್ಲ. ಸ್ವದ್ರಿ ಅರ್ಜಿಯ ನಕಲನ್ನು ಸಹ ವಾದಿಯರು ಈ ದಾವೆಯಲ್ಲಿ ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ಓ ಎಸ್ ನಂಬ್ರ 212/2011 ರ ದಾವೆಯು ಈ ದಾವೆಯ ಅನುಕ್ರಮ ನಂಬ್ರ 5 ಮತ್ತು 6 ರ ಆಸ್ತಿಯ ವಾಟಂಣಿ ಬಗ್ಗೆ ಸಲ್ಲಿಸಿದ್ದ ದಾವೆ ಎಂದರೆ ಸರಿ. ಸ್ವದ್ರಿ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿ

ಮುಂದುವರಿದು ನಮ್ಮ ತಂದೆಯವರ ಹೆಸರಿಗೆ ಡಿಕ್ರಿ ಆಗಿದೆ ಅಂತಾ ಉತ್ತರಿಸುತ್ತಾರೆ. ಸದ್ರಿ ದಾವೆಯ ಪ್ರತಿವಾದಿಯರು ಸದ್ರಿ ದಾವೆಯ ತೀರ್ಪನ್ನು ಪ್ರಶ್ನಿಸಿ ಇದೇ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದ್ರಿ ಅಪೀಲು ಪ್ರಕರಣದಲ್ಲಿ ಸದ್ರಿ ದಾವೆಯನ್ನು ಪುನರ್ ತನಿಖೆ ನಡೆಸುವಂತೆ ಪ್ರಕರಣವನ್ನು ಮೂಲ ದಾವೆಯ ನ್ಯಾಯಾಲಯಕ್ಕೆ ಕಳುಹಿಸಲಾಗಿದೆ ಎಂದರೆ ಸರಿ. ಆ ರೀತಿ ಕಳುಹಿಸಿದ ನಂತರ ಸದ್ರಿ ನ್ಯಾಯಾಲಯದಲ್ಲಿ ಸದ್ರಿ ದಾವೆಯ ಪ್ರತಿವಾದಿಯರು ಈ ದಾವಾ ಆಸ್ತಿಯ 1 ರಿಂದ 4 ನೇ ಐಟಂ ಆಸ್ತಿಗಳನ್ನು ಸೇರ್ಪಡೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದ್ರಿ ಅರ್ಜಿಯು ಅಂಗೀಕಾರಗೊಂಡಿರುತ್ತದೆ ಎಂದರೆ ಸರಿಯಲ್ಲ. ನಂತರ ದಾವೆಯ ಮೌಲ್ಯಮಾಪನ ಹೆಚ್ಚಾಗುತ್ತದೆ ಅಂತಾ ಮಾನ್ಯ ನ್ಯಾಯಾಲಯದಲ್ಲಿ ಪ್ರಶ್ನೆ ಉದ್ಬವಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ದಾವೆಯಲ್ಲಿ ಈಗಾಗಲೇ ಸಾಕ್ಷ್ಯ ವಿಚಾರಣೆ ಮುಗಿದಿರುವುದರಿಂದ ಬೇರೆ ನ್ಯಾಯಾಲಯಕ್ಕೆ ಪ್ರಕರಣವನ್ನು ಕಳುಹಿಸುವ ಅವಶ್ಯಕತೆ ಇಲ್ಲ ಅಂತಾ ಆದೇಶ ಆಗಿರುತ್ತದೆ ಎಂದರೆ ಸರಿ. ಸದ್ರಿ ಆದೇಶದ ವಿರುದ್ದ ನೀವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಓ ಎಸ್ ನಂಬ್ರ 212/2011 ರ ದಾವೆ ಈಗಲೂ ಸಹ ವಿಚಾರಣೆಗೆ ಬಾಕಿ ಇದೆ ಎಂದರೆ ಸಾಕ್ಷಿ ಕ್ಲೋಸ್ ಮಾಡಿದ್ದಾರೆ ಅಂತಾ ಉತ್ತರಿಸುತ್ತಾರೆ . ನಿಮ್ಮ ಪ್ರಕಾರ ಯಾವಾಗ ಕ್ಲೋಸ್ ಮಾಡಿದ್ದಾರೆ ಎಂದರೆ ಸಾಕ್ಷಿ 5 ವರ್ಷಗಳ ಹಿಂದೆ ಕ್ಲೋಸ್ ಮಾಡಿದ್ದಾರೆ ಅಂತಾ ಉತ್ತರಿಸುತ್ತಾರೆ . ಸದ್ರಿ ದಾವೆಯಲ್ಲಿ ನಮ್ಮನ್ನು ಪಕ್ಷಗಾರರನ್ನಾಗಿ ಸೇರಿಸಬೇಕು ಅಂತಾ ಈ ದಾವೆಯ ವಾದಿಯರು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದ್ರಿ ಅರ್ಜಿ ಸಲ್ಲಿಸಿದ ನಂತರ ನೀವು ಆ ದಾವೆಯನ್ನು ಮುಂದುವರಿಸುವುದಿಲ್ಲ ಅಂತಾ ಅರ್ಜಿ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಅವರು ಆ ರೀತಿ ಸಲ್ಲಿಸಿರುವ 2 ಅರ್ಜಿಗಳನ್ನು ಸಹ ಈ ದಾವೆಯಲ್ಲಿ ವಾದಿಯರು ಹಾಜರುಪಡಿಸಿ ನಿಪಿ-18 ಮತ್ತು 19 ರಂತೆ ನಿಶಾನಗೊಳಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

6. ಈ ದಾವೆಯ ದಾವಾ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಸರಿ. ಈ ದಾವೆಯ ಎಲ್ಲಾ ಆಸ್ತಿಗಳು ಪೋಲಿಸ್ ಇಲಾಖೆಗೆ ಬೇಕಾಗಿ ಭೂ ಸ್ವಾಧೀನ ಮಾಡಲಾಗಿದೆ ಎಂದರೆ ಕೇವಲ 8 ಗುಂಟೆ ಜಾಗ ನೋಟಿಫಿಕೇಶನ್ ಗಳ ಪ್ರಕಾರ ಮಾತ್ರ ಭೂ ಸ್ವಾಧೀನ ಆಗಿದೆ ಅಂತಾ ಉತ್ತರಿಸುತ್ತಾರೆ . ಸದ್ರಿ ಭೂ ಸ್ವಾಧೀನಕ್ಕೆ ಸಂಬಂಧಿಸಿದ ಪ್ರಕಾರಣ LAC 4/1980 ಎಂದರೆ ಸರಿ. ನೀವು ಹೇಳುವ 8 ಗುಂಟೆ ಸ್ವಾಧೀನಗೊಂಡಿರುವ ಆಸ್ತಿಯ ಸರ್ವೆ ನಂಬ್ರ 4 ಹಿಸ್ಸಾ 3 ಎಂದರೆ ಸರಿ. ಬಾಕಿ ಜಮೀನುಗಳೆಲ್ಲವೂ ನಿಮ್ಮ ಕುಟುಂಬದ ಸದಸ್ಯರ ಕಬಜಾದಲ್ಲಿ ಇದೆಯಾ ಎಂದರೆ ಸಾಕ್ಷಿ ಇದೆ ಅಂತಾ ಉತ್ತರಿಸುತ್ತಾರೆ . ರಿಕಾರ್ಡ್ ಉತಾರಿನಲ್ಲಿ ಪೋಲಿಸ್

ಇಲಾಖೆ ಅಂತಾ ನಮೂದು ಇದೆ ಎಂದರೆ ಸರಿ. ಈಗಲೂ ಸಹ ಪೋಲಿಸ್ ಇಲಾಖೆಯ ಹೆಸರಿನಲ್ಲೇ ಉತಾರು ಇದೆ ಎಂದರೆ ಸಾಕ್ಷಿ ಗಣಪತಿ ವೆಂಕಟೇಶ ಕಲ್ಗುಟ್ಕರ್ ರವರಿಂದ ಪೋಲಿಸ ಇಲಾಖೆಯ ಹೆಸರಿಗೆ ಮ್ಯುಟೇಶನ್ ಆಗಿಲ್ಲಾ ಅಂತಾ ಉತ್ತರಿಸುತ್ತಾರೆ . ಆ ರೀತಿ ಪೋಲಿಸ್ ಇಲಾಖೆಯವರ ಹೆಸರಿನಲ್ಲಿ ಇರುವ ರಿಕಾರ್ಡ್ ಉತಾರಿನಲ್ಲಿರುವ ಹೆಸರು ತೆಗೆದುಹಾಕಲು ಈವರೆಗೆ ಯಾರು ಪ್ರಯತ್ನಿಸಿಲ್ಲ ಎಂದರೆ ಸಾಕ್ಷಿ ನಾನು ಪ್ರಯತ್ನಿಸಿದ್ದೆ ಅಂತಾ ಉತ್ತರಿಸುತ್ತಾರೆ . ಈ ದಾವೆಯ ವಾದಿಯರು ಆ ಎಲ್ಲಾ ಉತಾರುಗಳನ್ನು ನಿಪಿ-1 ರಿಂದ 11 ರಂತೆ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ನಾವು ಜಿಲ್ಲಾಧಿಕಾರಿಗಳ ಮುಂದೆ ಕೇಸು ಹಾಕಿದ್ದು ಈಗಲೂ ಅದು ಬಾಕಿ ಇದೆ.

7. ಈ ದಾವೆಯ ಅನುಕ್ರಮ ಸಂಖ್ಯೆ 5 ಮತ್ತು 6 ರ ಆಸ್ತಿಗಳು ನಮ್ಮ ತಂದೆಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿದ್ದ ಆಸ್ತಿ ಎಂದರೆ ಸರಿ. ಈ ಎಲ್ಲಾ ಆಸ್ತಿಗಳು ವೆಂಕಟೇಶ ಬಾಬು ಭಂಡಾರಿಯವರು ಮೃತ ಪಟ್ಟ ನಂತರ ಬಂದ ಆಸ್ತಿಗಳು ಎಂದರೆ ಸಾಕ್ಷಿ ಸರ್ವೆ ನಂಬ್ರ 193/4 ರ ಆಸ್ತಿ ನಮ್ಮ ಅಜ್ಜಿಯವರ ಕಡೆಯಿಂದ ಬಂದ ಆಸ್ತಿ ಅಂತಾ ಉತ್ತರಿಸುತ್ತಾರೆ.

8. ದಾವಾ ಆಸ್ತಿಗಳನ್ನು ನಿಮ್ಮ ತಂದೆ ಹಾಗೂ ತಂದೆಯ ತಮ್ಮ ಹಾಗೂ ಸಹೋದರ -ಸಹೋದರಿಯರು ಒಟ್ಟಿಗೆ ಸಾಗುವಳಿ ಮಾಡಿಕೊಂಡು ಬಂದಿರುವ ಆಸ್ತಿಗಳು ಎಂದರೆ ಸರಿಯಲ್ಲ. ನಿಮ್ಮ ತಂದೆಯ ಸಹೋದರಿಯರು ಯಾವಾಗ ಮದುವೆ ಆಗಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆಯವರು ಹೇಳಿದ ಪ್ರಕಾರ 1945 ರ ಮೊದಲೇ ಅವರನ್ನು ಮದುವೆ ಮಾಡಿಕೊಟ್ಟಿದ್ದಾರೆ ಅಂತಾ ಹೇಳಿರುತ್ತಾರೆ. ದಾವಾ ಆಸ್ತಿಗಳು ನಮ್ಮ ಅಜ್ಜನ ಕುಟುಂಬಕ್ಕೆ ಸಾಧಾರಣ 100 ವರ್ಷಗಳ ಹಿಂದಿನಿಂದ ಬಂದ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ಭೂ ನ್ಯಾಯ ಮಂಡಳಿಯಿಂದ ಬಂದ ಆಸ್ತಿಗಳಿಗೆ ನಿಮ್ಮ ತಂದೆಯ ಸಹೋದರಿಯರಿಗೆ ಹಕ್ಕು ಸಿಗಬಾರದು ಎಂಬ ಉದ್ದೇಶದಿಂದ ಅವರ ಮದುವೆ ಬಹಳ ಹಿಂದೆಯೇ ಆಗಿದೆ ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಿಮ್ಮ ಲಿಖಿತ ತಕರಾರಿನಲ್ಲಿ ನಿಮ್ಮ ತಂದೆ ಹಾಗೂ ಚಿಕ್ಕಪ್ಪನ ನಡುವೆ ಬಹಳ ಹಿಂದೆಯೇ ವಾಂಟಣಿ ಆಗಿತ್ತು ಅಂತಾ ಹೇಳಿರುತ್ತೀರಿ ಎಂದರೆ ಸರಿ. ಯಾವ ವರ್ಷ ಸದ್ರಿ ವಾಂಟಣಿ ಆಗಿತ್ತು ಎಂದರೆ ಸಾಕ್ಷಿ

1974 ರಲ್ಲಿ ಆಗಿತ್ತು ಅಂತಾ ಉತ್ತರಿಸುತ್ತಾರೆ. ಆ ರೀತಿ ಆಗಿತ್ತು ಎನ್ನಲಾದ ವಾಂಟಣಿಯು ತೊಂಡಿ ವಾಂಟಣಿಯೋ ಅಥವಾ ಲಿಖಿತ ನೊಂದಾಯಿತ ವಾಂಟಣಿಯೋ ಎಂದರೆ ಸಾಕ್ಷಿ ಕಾಗದ ಪತ್ರದ ಪ್ರಕಾರವೇ ಆಗಿದೆ ಅಂತಾ ಉತ್ತರಿಸುತ್ತಾರೆ. ಆ ರೀತಿ ಕಾಗದ ಪತ್ರದಲ್ಲಿ ಆಗಿದೆ ಎನ್ನಲಾದ ವಾಂಟಣಿಯು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೊಂದಣಿ ಆಗಿದೆಯೇ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಫಾರಂ ನಂಬ್ರ 7 ರ ಅರ್ಜಿಯಲ್ಲಿ ವಾಂಟಣಿ ಆಗಿರುವ ಬಗ್ಗೆ ಬರೆಯಲಾಗಿದೆಯಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಹಾಗಾದರೆ ನಿಮ್ಮ ತಂದೆಯವರಿಗೆ ಯಾವ ಯಾವ ಆಸ್ತಿಯನ್ನು ವಾಂಟಣಿ ಪ್ರಕಾರ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಸರ್ವೆ ನಂಬ್ರ 4/1 ,4/2, 4/3 , 4/4 , 103/1, 103/3, ಸರ್ವೆ ನಂಬ್ರ 193/1 , ಸರ್ವೆ ನಂಬ್ರ 193/3, ಆಸ್ತಿಗಳು ನನ್ನ ತಂದೆಯವರಿಗೆ ಭೂ ನ್ಯಾಯ ಮಂಡಳಿ ಆದೇಶದ ಪ್ರಕಾರ ಬಂದಿರುತ್ತದೆ ಅಂತಾ ಉತ್ತರಿಸುತ್ತಾರೆ. ಹಾಗಾದರೆ ವಾಂಟಣಿಯ ಪ್ರಕಾರ ನಿಮ್ಮ ತಂದೆಯವರಿಗೆ ಯಾವುದೇ ಆಸ್ತಿಗಳು ಬಂದಿಲ್ಲ ಎಂದರೆ ಸರಿ. ಅದೇ ರೀತಿ ನಿಮ್ಮ ಚಿಕ್ಕಪ್ಪನವರಿಗೂ ಸಹ ವಾಂಟಣಿ ಪ್ರಕಾರ ಆಸ್ತಿ ಬಂದಿದೆಯಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ನಿಮ್ಮ ಚಿಕ್ಕಪ್ಪನಿಗೆ ವಾಂಟಣಿ ಪ್ರಕಾರ ಯಾವೆಲ್ಲಾ ಆಸ್ತಿಗಳು ಬಂದಿದೆ ಎಂದರೆ ಸಾಕ್ಷಿ ಸರ್ವೆ ನಂಬ್ರ 193/4, ಸರ್ವೆ ನಂಬ್ರ 7/1, 7/2, 7/4 ,ರ ಆಸ್ತಿಗಳು ಬಂದಿವೆ ಅಂತಾ ಉತ್ತರಿಸುತ್ತಾರೆ. ನಾನು ಈಗ ಹೇಳಿರುವ ಎಲ್ಲಾ ಆಸ್ತಿಗಳು ಈ ದಾವೆಯ ದಾವಾ ಆಸ್ತಿಗಳಲ್ಲ ಎಂದರೆ ಸರಿ. ನಿಮ್ಮ ಲಖಿತ ತಕರಾರಿನಲ್ಲಿ ಈ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂಬ ತಕರಾರನ್ನು ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿ ನಾವು ನಮ್ಮ ಆಸ್ತಿಗೆ ಮಾತ್ರ ತಕರಾರು ಎತ್ತಿದ್ದೇವೆ ಅಂತಾ ಉತ್ತರಿಸುತ್ತಾರೆ. ವಾಂಟಣಿ ಆದರೆ ಮ್ಯುಟೇಶನ್ ನಮೂದಾಗುತ್ತದೆ ಎಂದರೆ ಸರಿ. ಆ ರೀತಿ ವಾಂಟಣಿ ಆಗಿರುವ ಬಗ್ಗೆ ಯಾವುದೇ ಮ್ಯುಟೇಶನ್ ಆದೇಶ ಆಗಿರುವುದಿಲ್ಲ ಎಂದರೆ ಸಾಕ್ಷಿ ಆಗಿದೆ ಅಂತಾ ಉತ್ತರಿಸುತ್ತಾರೆ. ಆ ರೀತಿ ವಾಂಟಣಿ ಆದರೆ ಉತಾರಿನಲ್ಲಿ ವಾಂಟಣಿ ಆಗಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ವಾದಿಯರು ಹಾಜರುಪಡಿಸಿರುವ ನಿಪಿ-1 ರಿಂದ 11 ರ ದಾಖಲೆಗಳಲ್ಲಿ ವಾಂಟಣಿ ಆಗಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಆ ರೀತಿ ವಾಂಟಣಿ ಆಗಿದೆ ಅಂತಾ ನಾನು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ದಾವಾ ಆಸ್ತಿಗಳ ಮೇಲೆ ಇರುವ ತಲಾ 1/6 ಅಂಶ ಹಕ್ಕನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ ಎಂದರೆ ಸರಿಯಲ್ಲ. . ನೀವು ಸುಮ್ಮನೆ ಅವರ ಹಕ್ಕನ್ನು ನಿರಾಕರಿಸಲು ಸುಳ್ಳು ಸಾಧನೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಇನ್ನಿತರ ಪ್ರಕರಣಗಳಲ್ಲಿ 1 ರಿಂದ 6 ನೇ ಪ್ರತಿವಾದಿಯರ ಜಿ.ಪಿ.ಎ ತೆಗೆದುಕೊಂಡು ನಾನೇ ವ್ಯವಹರಣೆ ನಡೆಸಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ನನಗೆ ದಾವೆಗಳ ಬಗ್ಗೆ ಹೆಚ್ಚು ಅನುಭವ ಇದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಉಳಿದ ಪ್ರತಿವಾದಿಯರ ಪರವಾಗಿಯೂ ಸಹ ನಾನೇ ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿ.

10. ನನ್ನ ತಂದೆಯವರು ಸರ್ವೆ ನಂಬ್ರ 193/3 ರಲ್ಲಿ 2 ಗುಂಟೆ ಜಾಗವನ್ನು ಶ್ಯಾಮ ಪುಂಡಲೀಕ ಕುಲ್ಲುಟ್ಕರ್ ಇವರಿಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಕ್ರಯ ಪತ್ರ ಮಾಡಿದ್ದು ಈವರೆಗೆ ನೊಂದಣೆ ಮಾಡಿಲ್ಲ ಅಂತಾ ಉತ್ತರಿಸುತ್ತಾರೆ . ಆ ಬಗ್ಗೆ ಮ್ಯುಟೇಶನ್ ಆಗಿದೆ ಎಂದರೆ ಸರಿಯಲ್ಲ. ನಿಮ್ಮ ತಂದೆಯವರಿಗೆ ಆ ರೀತಿ 2 ಗುಂಟೆ ಜಾಗವನ್ನು ವರ್ಗಾವಣೆ ಮಾಡಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಕಾರವಾರ.**